ದಿಃ 29.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಚ್.ಬಿ.ಎಸ್. ವಕೀಲರಿಂದ ,**

6. ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರು ನನ್ನ ಚಿಕ್ಕಪ್ಪನ ಮಕ್ಕಳು. ನನ್ನ ತಾತನ ಹೆಸರು ಸಯ್ದಾನ್ ಸಾಬ್. ಆತನಿಗೆ 5 ಜನ ಮಕ್ಕಳು. ಆತ ದೊಣಬಘಟ್ಟ ಗ್ರಾಮದಲ್ಲಿ ವಾಸ ಇದ್ದರು. ಆತನಿಗೆ ಏನು ಸ್ವತ್ತುಗಳು ಇದ್ದವು ನನಗೆ ತಿಳಿದಿರುತ್ತದೆ. ಆತನಿಗೆ ಬಿಳಕಿ ಗ್ರಾಮದಲ್ಲಿ 8 ಎಕರೆ 30 ಗುಂಟೆ ಜಮೀನು ಹಾಗೂ ದೊಣಬಘಟ್ಟ ಗ್ರಾಮದಲ್ಲಿ 6 ಎಕರೆ 7 ಗುಂಟೆ, 10 ಎಕರೆ 10 ಗುಂಟೆ ಜಮೀನುಗಳು ಇದ್ದವು. ನನ್ನ ತಾತನನ್ನು ನಾನು ನೋಡಿರುವುದಿಲ್ಲ. ಆತನ 5 ಜನ ಮಕ್ಕಳ ನಡುವೆ 1972 ರಲ್ಲಿ ವಿಭಾಗ ಆಗಿರುತ್ತದೆ. ಆ ಸಂಬಂಧ ನಾನು ದಾಖಲೆ ನೋಡಿರುತ್ತೇನೆ. ವಾದಿ ಹಾಗೂ ಪ್ರತಿವಾದಿ 1 ರಿಂದ 8 ರವರ ತಂದೆ ಉಮ್ಮರ್ ಸಾಬ್ ರವರಿಗೆ ವಿಭಾಗದಲ್ಲಿ ಕೊಪ್ಪದಾಳು ಗ್ರಾಮದ ಸರ್ವೆ ನಂಬರ್ 26 ರಲ್ಲಿ 5 ಎಕರೆ 20 ಗುಂಟೆ, ದೊಣಬಘಟ್ಟ ಗ್ರಾಮದ ಸರ್ವೆ ನಂಬರ್ 49 ರಲ್ಲಿ 1 ಎಕರೆ 37 ಗುಂಟೆ, ಜಮೀನನ್ನು ನೀಡಲಾಗಿತ್ತು. ಸದರಿ ಉಮ್ಮರ್ ಸಾಬ್ ರವರ ಹೆಸರಿಗೆ ದೊಣಬಘಟ್ಟ ಗ್ರಾಮದಲ್ಲಿ 3 ಮನೆಗಳು ಇದ್ದವು. ಆ ಪೈಕಿ 1 ಮನೆಯನ್ನು ಆತ ಮಾರಾಟ ಮಾಡಿದ್ದರು. ಉಳಿಕೆ 2 ಮನೆಗಳ ಪೈಕಿ ಒಂದರಲ್ಲಿ ಪ್ರತಿವಾದಿ 1 ಹಾಗೂ 2 ವಾಸವಿದ್ದು, ಮತ್ತೊಂದು ಮನೆ ಖಾಲಿ ಇರುತ್ತದೆ.

7. 3 ನೇ ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ನನಗೆ ತಿಳಿದಿಲ್ಲ. ಆತ ಆತನ ತಂದೆಗೆ ಸೇರಿದ್ದ ಯಾವುದೇ ಮನೆಯಲ್ಲಿ ವಾಸವಿರುವುದಿಲ್ಲ ಎಂದರೆ ಸರಿ. ಉಮ್ಮರ್ ಸಾಬ್ ತನ್ನ ಜೀವಿತ ಕಾಲದಲ್ಲಿ ಸ್ವಂತವಾಗಿ 9 – 10 ಎಕರೆ ಜಮೀನನ್ನು ಖರೀದಿಸಿದ್ದರು. ಆತ ದೊಣಬಘಟ್ಟ ಗ್ರಾಮದಲ್ಲಿ ವಾಸವಿದ್ದು, ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ಉಮ್ಮರ್ ಸಾಬ್ ತನ್ನ ಜೀವಿತ ಕಾಲದಲ್ಲಿ ಮನೆತನದ ವ್ಯವಹಾರಗಳನ್ನು

ಆತನೇ ಮಾಡುತ್ತಿದ್ದರು ಎಂದರೆ ಸರಿ. ಕಂದಾಯ ದಾಖಲೆಗಳು ಆತನ ಹೆಸರಿಗೆ ಇದ್ದವು ಎಂದರೆ ಸರಿ. ಆತನಿಗೆ ವ್ಯವಹಾರ ಜ್ಞಾನ ಇತ್ತು ಎಂದರೆ ಸರಿ. ಆತನ ಜೀವಿತ ಕಾಲದಲ್ಲಿಯೇ ಆತನ ಎಲ್ಲಾ ಮಕ್ಕಳು ಮದುವೆ ಆಗಿರುತ್ತದೆ ಎಂದರೆ ಸರಿ. ಮದುವೆ ನಂತರ ಎಲ್ಲಾ ಮಕ್ಕಳು ಮೃತ ಉಮ್ಮರ್ ಸಾಬ್ ರವರಿಂದ ಪ್ರತ್ಯೇಕ ವಾಸ ಇದ್ದರು ಎಂದರೆ ಸರಿ. ಆತ ತಮ್ಮ ಜೀವಿತ ಕಾಲದಲ್ಲಿ ತಮ್ಮ ಮಕ್ಕಳ ನಡುವೆ ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿ. ನಿಪಿ - 2 ಕ್ಕೆ ಸಾಕ್ಷಿ ಸಹಿ ಮಾಡಿರುವ ರಸೂಲ್ ಬೇಗ್ ಬಿನ್ ಖಾಸಿಂ ಬೇಗ್ ನನ್ನ ತಮ್ಮ ಎಂದರೆ ಸರಿಯಲ್ಲ. ನಿಪಿ - 2 ರಂತೆ ಸ್ವತ್ತುಗಳ ಖಾತೆ ಉಮ್ಮರ್ ಸಾಬ್ ರವರ  ಮಕ್ಕಳುಗಳ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದವರೆದು ಅವರ ನಡುವೆ ವಿಭಾಗ ಪತ್ರ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ಕಂದಾಯ ದಾಖಲೆಗಳಂತೆ ಎಲ್ಲರೂ ಪ್ರತ್ಯೇಕವಾಗಿ ಜಮೀನುಗಳ ಸ್ವಾಧೀನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳ ಮೇಲೆ ಅವರುಗಳು ಬ್ಯಾಂಕ್ ನಲ್ಲಿ ಸಾಲ ಪಡೆದು ಅದನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿ.

8. ತಾಲ್ಲೂಕು ಕಛೇರಿ ಹಾಗೂ ಉಪನೊಂದಣಾಧಿಕಾರಿ ಕಛೇರಿಗಳಲ್ಲಿ ವ್ಯವಹರಿಸಿದ ಬಗ್ಗೆ ನನಗೆ ಅನುಭವ ಇರುತ್ತದೆ ಎಂದರೆ ಸರಿ. ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

9.ನನ್ನ ಚಿಕ್ಕಪ್ಪ ಉಮ್ಮರ್ ಸಾಬ್ ಸುಮಾರು 8 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಆತ ತನ್ನ ಜೀವಿತ ಕಾಲದಲ್ಲಿ ಆತನ ಕುಟುಂಬದಲ್ಲಿ ಆದ ವಿಭಾಗ ಪತ್ರದ ಬಗ್ಗೆ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಆತ ಆ ಸಂಬಂಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಸದರಿ ದಾವೆಯನ್ನು ಯಾವ ಸಾಲಿನಲ್ಲಿ ಹೂಡಿದ್ದರು ನನಗೆ ತಿಳಿದಿಲ್ಲ. ದಾವೆಯ ವಿವರಗಳು ನನಗೆ ತಿಳಿದಿಲ್ಲ. ಆ ಸಂಬಂಧ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಆತ ಯಾವುದೇ ದಾವೆ ಹೂಡಿರಲಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಘವೇಂದರ ವಕೀಲರು ಸದರಿ ದಾವೆ ಹೂಡಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆ ಈಗಲೂ ಬಾಕಿ ಇರುತ್ತದೆ. ಅದನ್ನು ವಾದಿ ನಡೆಸುತ್ತಿರುತ್ತಾರೆ. ಸದರಿ ದಾವೆ ಹಾಗೂ ಈ ದಾವೆ ಬೇರೆ ಬೇರೆ ಆಗಿರುತ್ತವೆ. ಸದರಿ ವಿಭಾಗದಂತೆ 3 ನೇ ಪ್ರತಿವಾದಿ ಹೆಸರಿಗೆ ಸರ್ವೆ ನಂಬರ್ 26 ರಲ್ಲಿ ಒಟ್ಟು 4 ಎಕರೆ 13 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಅದರಲ್ಲಿ ಈಗಲೂ ಆತನೇ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿ.

10. ಮೃತ ಉಮ್ಮರ್ ಸಾಬ್ ಕೆಲವು ಸ್ವತ್ತುಗಳನ್ನು ವಿಲ್ ಮೂಲಕ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 29-11-2006 ರ ನೊಂದಾಯಿತ ಮರಣ ಶಾಸನದಲ್ಲಿನ ಮೃತ ಉಮ್ಮರ್ ಸಾಬ್ ರವರ ಭಾವಚಿತ್ರ ಹಾಗೂ ಸಹಿಗಳನ್ನು ನೋಡಿ ಗುರುತಿಸಲು ಹೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪತ್ರವನ್ನು ಅಡ್ಡಲಾಗಿ ನಿಡಿ - 11 ಎಂದು ಗುರುತಿಸಲಾಯಿತು ಹಾಗೂ ಸದರಿ ಭಾವಚಿತರ ಹಾಗೂ ಸಹಿಯನ್ನು ನಿಡಿ - 11(ಎ) ಹಾಗೂ ನಿಡಿ - 11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಡಿ - 10 ರಲ್ಲಿನ ಮೃತ ಉಮ್ಮರ್ ಸಾಬ್ ರವರ ಭಾವಚಿತ್ರ ಹಾಗೂ ಸಹಿಗಳನ್ನು ನೋಡಿ ಗುರುತಿಸಲು ಹೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿ ಒಪ್ಪಿಕೊಂಡಿರುತ್ತಾರೆ. ನಿಡಿ - 10 ರ ಅಡಿ ಮೃತ ಉಮ್ಮರ್ ಸಾಬ್ ದೊಣಬಘಟ್ಟ ಗ್ರಾಮದ ಸರ್ವೆ ನಂಬರ್ 49/1 ರಲ್ಲಿ 1 ಎಕರೆ 37 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಪತ್ರವನ್ನು ಮೋಸ ಮಾಡಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಸ್ವತ್ತನ್ನು ಮೃತ ಉಮ್ಮರ್ ಸಾಬ್ ಆತನ ಹೆಣ್ಣು ಮಕ್ಕಳಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನು ಉಮ್ಮರ್ ಸಾಬ್ ರವರ ಸ್ವಂತ ಜಮೀನು ಎಂದರೆ ಸರಿ. ಆತ 2017 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಂತರ ನಿಡಿ - 10 ರ ಆಧಾರದಲ್ಲಿ ಸದರಿ ಸ್ವತ್ತಿನ ಖಾತೆ 3 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು 3 ನೇ ಪ್ರತಿವಾದಿ ದಿಃ 20-03-

2019 ರಂದು 12 ನೇ ಪ್ರತಿವಾದಿ ಹೆಸರಿಗೆ ನಿಪಿ - 3 ರಂತೆ ದಾನ ಪತ್ರ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಅದರಂತೆ ಸದರಿ ಸ್ವತ್ತಿನ ಕಂದಾಯ ದಾಖಲೆಗಳು 12 ನೇ ಪ್ರತಿವಾದಿ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ 12 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ ಉಮ್ಮರ್ ಸಾಬ್ ರವರ ಹೆಣ್ಣು ಮಕ್ಕಳು ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಸದರಿ ಹೆಣ್ಣು ಮಕ್ಕಳಿಗೆ ನೀಡಿದ ಸಂಬಂಧ ಯಾವುದೇ ದಾಖಲೆ ಇರುವುದಿಲ್ಲ, ಆದರೆ ಮೃತ ಉಮ್ಮರ್ ಸಾಬ್ ಬಾಯಿಮಾತಿನಲ್ಲಿ ನೀಡಿರುತ್ತಾರೆ. ಸದರಿ ಜಮೀನಿನಲ್ಲಿ ವಾದಿ, ಪ್ರತಿವಾದಿ 4 ರಿಂದ 8 ಒಟ್ಟಿಗೆ ಸಾಗುವಳಿ ಮಾಡುತ್ತಿರುತ್ತಾರೆ. ಅಲ್ಲಿ ಅವರು ಭತ್ತ ಬೆಳೆಯುತ್ತಿರುತ್ತಾರೆ. ಆ ರೀತಿ ಸದರಿ ಸ್ವತ್ತನ್ನು ಅವರುಗಳಿಗೆ ನೀಡದೇ ಇದ್ದರು ಹಾಗೂ ಅದರಲ್ಲಿ ಅವರುಗಳು ಸ್ವಾಧೀನದಲ್ಲಿ ಇಲ್ಲದೇ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**